# ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಮಂ.ವಿ./ಪ.ವಿ./ಸಿಆರ್.28/2025/ಇ.5

ಕುಲಸಚಿವರ (ಪರೀಕ್ಷಾಂಗ) ಕಛೇರಿ,
ಮಂಗಳಗಂಗೋತ್ರಿ - 574 199.
ದಿನಾಂಕ: 21.04.2025

**ಪರೀಕ್ಷಾ ಪ್ರಕಟಣೆ**

**ವಿಷಯ: 2025ನೇ ಸಾಲಿನ ಜೂನ್/ಜುಲೈ 2025ನೇ ತಿಂಗಳಿನಲ್ಲಿ ನಡೆಯಲಿರುವ ಎಲ್ಲಾ ಸ್ನಾತಕ ಕಾರ್ಯಕ್ರಮಗಳ ದ್ವಿತೀಯ, ಚತುರ್ಥ, ಆರನೇ ಮತ್ತು ಎಂಟನೇ ಸೆಮಿಸ್ಟರ್ ಪರೀಕ್ಷೆಗಳ ಬಗ್ಗೆ**

************

ಮಂಗಳೂರು ವಿಶ್ವವಿದ್ಯಾನಿಲಯದ 2024-2025ನೇ ಸಾಲಿನ ಜೂನ್/ಜುಲೈ ತಿಂಗಳಲ್ಲಿ ನಡೆಯಲಿರುವ ರಾಜ್ಯ ಶಿಕ್ಷಣ ನೀತಿ ಆಧಾರಿತ ದ್ವಿತೀಯ ಸೆಮಿಸ್ಟರ್ ಆವರ್ತಿತ, ರಾಷ್ಟ್ರೀಯ ಶಿಕ್ಷಣ ನೀತಿ 2020 ಆಧಾರಿತ ದ್ವಿತೀಯ ಸೆಮಿಸ್ಟರ್ ಪುನರಾವರ್ತಿತ, ಚತುರ್ಥ ಮತ್ತು ಆರನೇ ಸೆಮಿಸ್ಟರ್ ಆವರ್ತಿತ ಹಾಗೂ ಪುನರಾವರ್ತಿತ, ಆಯ್ಕೆ ಆಧಾರಿತ ಚತುರ್ಥ, ಆರನೇ ಸೆಮಿಸ್ಟರ್ ಪುನರಾವರ್ತಿತ, ಹಾಗೂ ಎಂಟನೇ ಸೆಮಿಸ್ಟರ್ (ಬಿ.ಹೆಚ್.ಎಮ್) ಆವರ್ತಿತ ಹಾಗೂ ಪುನರಾವರ್ತಿತ ಕ್ರೆಡಿಟ್ ಆಧಾರಿತ ದ್ವಿತೀಯ, ಚತುರ್ಥ, ಆರನೇ ಮತ್ತು ಎಂಟನೇ ಸೆಮಿಸ್ಟರ್ ಪುನರಾವರ್ತಿತ ಮತ್ತು ವಾರ್ಷಿಕ ಪದ್ಧತಿಯ ಪುನರಾವರ್ತಿತ ಕಾರ್ಯಕ್ರಮಗಳ ಲಿಖಿತ ಪರೀಕ್ಷೆಗಳು ದಿನಾಂಕ **09.06.2025**ರಿಂದ ಪ್ರಾರಂಭವಾಗಲಿರುವುದು ಎಂಬುದನ್ನು ಪದವಿ ಕಾರ್ಯಕ್ರಮಗಳ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮತ್ತು ಸದರಿ ಪರೀಕ್ಷೆಗಳಿಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳ ಗಮನಕ್ಕೆ ಈ ಮೂಲಕ ತರಲಾಗಿದೆ.

**ಸೂಚನೆಗಳು:**

1. ರಾಜ್ಯ ಶಿಕ್ಷಣ ನೀತಿ ಆಧಾರಿತ ದ್ವಿತೀಯ ಸೆಮಿಸ್ಟರ್, ರಾಷ್ಟ್ರೀಯ ಶಿಕ್ಷಣ ನೀತಿ 2020 ಆಧಾರಿತ ದ್ವಿತೀಯ ಚತುರ್ಥ ಆರನೇ ಹಾಗೂ ಎಂಟನೇ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಎಲ್ಲಾ ವಿಷಯಗಳಿಗೆ/ಪತ್ರಿಕೆಗಳಿಗೆ ಕಡ್ಡಾಯವಾಗಿ **UUCMS Portal** ನಲ್ಲಿ ನೋಂದಣಿ ಮಾಡತಕ್ಕದ್ದು **ಹಾಗೂ ಸಂಬಂಧಿಸಿದ ಪರೀಕ್ಷಾ ಶುಲ್ಕವನ್ನು Onlineನಲ್ಲಿಯೇ UUCMS Portal ಮುಖಾಂತರ ಪಾವತಿಸತಕ್ಕದ್ದು.**
2. **UUCMS Portal** ನಲ್ಲಿ **Online** ನಲ್ಲಿ ಶುಲ್ಕ ಪಾವತಿಸಿದ **(Report) ಪ್ರತಿಯನ್ನು ಪ್ರಾಂಶುಪಾಲರು ದೃಢೀಕರಿಸಿ ಕುಲಸಚಿವರು (ಪರೀಕ್ಷಾಂಗ) ರ ಕಛೇರಿಗೆ ನಿಗದಿತ ಸಮಯದೊಳಗೆ ತಪ್ಪದೆ ಕಳುಹಿಸಿಕೊಡುವುದು.**
3. **ಆಂತರಿಕ ಅಂಕಗಳ ಪಟ್ಟಿಯನ್ನು Online ನಲ್ಲಿ ಭರ್ತಿ ಮಾಡಿ Upload ಮಾಡುವ ಮೊದಲು ಸರಿಯಾಗಿದೆಯೆಂದು ಖಚಿತಪಡಿಸಿಕೊಂಡು ನಂತರ ವಿದ್ಯಾರ್ಥಿಗಳ ಸಹಿ ಪಡೆದು ಕಡ್ಡಾಯವಾಗಿ ಕುಲಸಚಿವರು (ಪರೀಕ್ಷಾಂಗ) ರ ಕಛೇರಿಗೆ ಕಳುಹಿಸತಕ್ಕದ್ದು. ಒಂದು ಸಲ Upload ಮಾಡಿದ ಮೇಲೆ ತಿದ್ದುಪಡಿಗೆ ಅವಕಾಶವಿರುವುದಿಲ್ಲ.**
4. ಆಯ್ಕೆ ಆಧಾರಿತ ಕ್ರೆಡಿಟ್ ಮತ್ತು ಕ್ರೆಡಿಟ್ ಆಧಾರಿತ ಸೆಮಿಸ್ಟರ್ ಹಾಗೂ ಇತರೇ ಸೆಮಿಸ್ಟರ್ ಸ್ಕೀಂನ ಆವರ್ತಿತ ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸುವುದು. 2006ರ ನಂತರದ ಸಾಲಿನ ಕ್ರೆಡಿಟ್ ಆಧಾರಿತ ಸೆಮಿಸ್ಟರ್ ಸ್ಕೀಂನ ವಿದ್ಯಾರ್ಥಿಗಳು ಆನ್‌ಲೈನ್ ಪರೀಕ್ಷಾ ಅರ್ಜಿಯಲ್ಲಿ **ಕಡ್ಡಾಯ ವಿಷಯ (ಫೌಂಡೇಶನ್ ಕೋರ್ಸ್) ಹಾಗೂ ಪಠ್ಯೇತರ ವಿಷಯ (ಇಸಿ/ಸಿಸಿ) ಗಳನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.**
5. **ಪ್ರಾಯೋಗಿಕ ಪರೀಕ್ಷೆಗಳನ್ನು ಲಿಖಿತ ಪರೀಕ್ಷೆಗಳ ಮುಂಚಿತವಾಗಿ ಅಥವಾ ನಂತರ ನಡೆಸಬಹುದು. ಈ ಬಗ್ಗೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುತ್ತದೆ.**
6. ಆನ್‌ಲೈನ್ ಎಪ್ಲಿಕೇಶನ್ ಪ್ರೊಸೆಸಿಂಗ್ ಶುಲ್ಕ ರೂ. **200.00 (ರೂಪಾಯಿ ಇನ್ನೂರು) ನ್ನು** ಕಾಲೇಜು ಮುಖ್ಯಸ್ಥರಲ್ಲಿ ಪಾವತಿಸಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವುದು.
7. ***ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹಾಗೂ ಸದ್ರಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಶುಲ್ಕ ಪಾವತಿಸಿದ ರಶೀದಿ/ಚಲನ್‌ನನ್ನು ಪ್ರತ್ಯೇಕವಾಗಿ ಎಲ್ಲಾ ವಿವರಗಳನ್ನೊಳಗೊಂಡ ಮಾಹಿತಿಯೊಂದಿಗೆ ಸಲ್ಲಿಸತಕ್ಕದ್ದು.***
8. ***ಕುಲಸಚಿವರಿಂದ ಪ್ರವೇಶಾತಿ ಮತ್ತು ವರ್ಗಾವಣೆ ಪ್ರವೇಶಾತಿ ಅನುಮೋದಿಸಲ್ಪಡದ ವಿದ್ಯಾರ್ಥಿಗಳು ಮತ್ತು ನಿಯಮಾನುಸಾರ ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಲು ಅನರ್ಹರಾಗಿರುತ್ತಾರೆ.*** **ಪ್ರವೇಶಾವಕಾಶವು ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾನಿಲಯದಿಂದ ಪ್ರವೇಶವು ಅನುಮೋದಿತವಾಗಿಲ್ಲದ ಅಥವಾ ನಿರ್ದಿಷ್ಟ ಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಿಗೆಯಾಗಿ ಕಾಲೇಜಿಗೆ ಅಥವಾ ವ್ಯಾಸಂಗ ಕ್ರಮಕ್ಕೆ ಪ್ರವೇಶ ಪಡೆದಿರುವ ಯಾವೊಬ್ಬ ವಿದ್ಯಾರ್ಥಿಯೂ, ಕಾಲೇಜು ಅಥವಾ ವಿಶ್ವವಿದ್ಯಾನಿಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಅಲ್ಲದೆ ಆಯಾ ಕಾರ್ಯಕ್ರಮದ ನಿಯಮದ ಪ್ರಕಾರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಲ್ಲದ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸುವಂತಿಲ್ಲ.**

10. *ವಿಶ್ವವಿದ್ಯಾನಿಲಯದ ವಿನಿಯಮದ (ರೆಗ್ಯುಲೇಶನ್) ಪ್ರಕಾರ ಪರೀಕ್ಷೆಗೆ ಹಾಜರಾಗಲು ಅರ್ಹತೆಯನ್ನು ಹೊಂದಿದ ವಿದ್ಯಾರ್ಥಿಗಳಿಗೆ ಮಾತ್ರ ಆನ್‌ಲೈನ್ ಮುಖಾಂತರ ಪರೀಕ್ಷಾ ಅರ್ಜಿಯನ್ನು ಸಲ್ಲಿಸಲು ಅನುಮತಿಯನ್ನು ನೀಡಲಾಗಿದೆ.* ಸದ್ರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು. ಇಲ್ಲವಾದಲ್ಲಿ ಕಾಲೇಜಿನ ಪ್ರಾಂಶುಪಾಲರೇ ಜವಾಬ್ದಾರರಾಗುವರು.

11. ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ (ಕಾಲೇಜು ಮತ್ತು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿ) ಕಾಲೇಜುಗಳಲ್ಲಿ ಹಾಜರಿಲ್ಲದ ವಿದ್ಯಾರ್ಥಿಗಳು ಕೂಡಾ ನಿಗದಿತ ಶುಲ್ಕದೊಂದಿಗೆ ಆನ್‌ಲೈನ್ ಮುಖಾಂತರ ನಿಯಮಾನುಸಾರ ಪರೀಕ್ಷಾ ಅರ್ಜಿಯನ್ನು ಸಲ್ಲಿಸುವಂತೆ (ಇತರ ವಿದ್ಯಾರ್ಥಿಗಳೊಂದಿಗೆ) ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳು ನಿಗಾವಹಿಸತಕ್ಕದು.

12. *ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳ ಪರೀಕ್ಷಾ ಹಣಕಾಸು ತಖ್ತೆ ಹಾಗೂ ಪರೀಕ್ಷಾರ್ಥಿಗಳ ಪಟ್ಟಿಯನ್ನು ಅನುಮೋದಿಸಲ್ಪಟ್ಟ ಪ್ರವೇಶಾನುಮೋದನೆ ಪಟ್ಟಿಯಲ್ಲಿ ಸೂಚಿಸಿರುವ ಮಾದರಿಯಲ್ಲಿ ಯಾವುದೇ ಕಾಗುಣಿತ ವ್ಯತ್ಯಾಸವಿಲ್ಲದಂತೆ ದಾಖಲಿಸಬೇಕು.*

13. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು (ದಂಡಶುಲ್ಕ ರಹಿತ ಮತ್ತು ವಿವಿಧ ದರಗಳಲ್ಲಿ ದಂಡಶುಲ್ಕ ಸಹಿತ) ಪಾವತಿ ಮಾಡಲು ಈ ಕೆಳಕಂಡ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

**ಪರೀಕ್ಷಾ ಶುಲ್ಕವನ್ನು ಕಟ್ಟಲು ನಿಗದಿಪಡಿಸಲಾದ ಅಂತಿಮ ದಿನಾಂಕ:**

| | | |
|---|---|---|
| **ದಂಡಶುಲ್ಕ ರಹಿತ** | . . . | **05.05.2025** |
| **ದಂಡಶುಲ್ಕ ದಿನವೊಂದಕ್ಕೆ ರೂ. 75/- ರಂತೆ** | . . . | **06.05.2025 ರಿಂದ 08.05.2025** |
| **ದಂಡಶುಲ್ಕ ದಿನವೊಂದಕ್ಕೆ ರೂ.150/- ರಂತೆ** | . . . | **09.05.2025 ರಿಂದ 12.05.2025ರವರೆಗೆ** |

14. ಒಮ್ಮೆ ಪಾವತಿಸಲಾದ ಪರೀಕ್ಷಾ ಶುಲ್ಕವನ್ನು ಯಾವ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗಳಿಗೆ ಸರಿದೂಗಿಸಿಕೊಳ್ಳಲಾಗುವುದಿಲ್ಲ.

15. **ಜೂನ್/ಜುಲೈ** *2024ರ ಪರೀಕ್ಷೆಯ ಫಲಿತಾಂಶ ಪ್ರಕಟವಾಗದ ವಿದ್ಯಾರ್ಥಿಗಳು, ಮರು ಮೌಲ್ಯಮಾಪನ ಮತ್ತು ಮರು ಸಂಕಲನಕ್ಕೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಹಾಗೂ ಫಲಿತಾಂಶ ಪ್ರಕಟವಾಗಲು ಬಾಕಿ ಇರುವ ವಿದ್ಯಾರ್ಥಿಗಳು ಸಹ ಪರೀಕ್ಷೆಗೆ ನಿಗದಿಪಡಿಸಿದ ದಿನಾಂಕದೊಳಗಾಗಿ ಪರೀಕ್ಷಾ ಶುಲ್ಕದೊಂದಿಗೆ ಅಭ್ಯರ್ಥನ ಪತ್ರವನ್ನು ಸಲ್ಲಿಸತಕ್ಕದ್ದು. ಯಾವುದೇ ಕಾರಣಕ್ಕೂ ಅಂತಹ ಅಭ್ಯರ್ಥಿಗಳಿಗೆ ಪಾವತಿ ದಿನಾಂಕವನ್ನು ಮುಂದೂಡಲಾಗುವುದಿಲ್ಲ. ಪರೀಕ್ಷಾ ಅವ್ಯವಹಾರಗಳಲ್ಲಿ ಭಾಗಿಯಾಗಿ, ವಿಶ್ವವಿದ್ಯಾನಿಲಯದ ನಿರ್ಣಯ ಬಾಕಿ ಇರುವಂತಹ ಅಭ್ಯರ್ಥಿಗಳು ಸಹ ನಿಗದಿತ ಸಮಯದೊಳಗೆ ಶುಲ್ಕವನ್ನು ಪಾವತಿಸಬೇಕು ಮತ್ತು ಅಭ್ಯರ್ಥನ ಪತ್ರವನ್ನು ಸಲ್ಲಿಸಬೇಕು.*

16. ಅಭ್ಯರ್ಥಿಗಳು ತಮ್ಮ ಪರೀಕ್ಷಾ ಶುಲ್ಕವನ್ನು ಹಾಗೂ ಅರ್ಜಿಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸಬೇಕು.

17.

| ಕ್ರಮ ಸಂಖ್ಯೆ | ಪರೀಕ್ಷೆ | ರಾಜ್ಯ ಶಿಕ್ಷಣ ನೀತಿ ಆಧಾರಿತ, ರಾಷ್ಟ್ರೀಯ ಶಿಕ್ಷಣ ನೀತಿ 2020 ಆಧಾರಿತ ಸೆಮಿಸ್ಟರ್ ಆಧಾರಿತ ಮತ್ತು ಆಯ್ಕೆ ಆಧಾರಿತ ಕ್ರೆಡಿಟ್ ಹಾಗೂ ಕ್ರೆಡಿಟ್ ಆಧಾರಿತ ಸೆಮಿಸ್ಟರ್/ ವರ್ಷ | ಶುಲ್ಕ ದರ |
|---|---|---|---|
| 1. | ಬಿ.ಎ./ಬಿ.ಕಾಂ./ ಬಿ.ಎಸ್.ಡಬ್ಲ್ಯು./ ಬಿಬಿಎ/ಬಿಬಿಎಂ/ಬಿಬಿಎ(ಟಿಟಿಎಮ್) ಬಿಬಿಎ(ಲಾಜಿಸ್ಟಿಕ್)/ ಬಿ.ಎ.(ಹೆಚ್‌ಆರ್‌ಡಿ) | **ದ್ವಿತೀಯ ಹಾಗೂ ಚತುರ್ಥ ಸೆಮಿಸ್ಟರ್** | |
| | | **(ಪ್ರಾಯೋಗಿಕ ಪರೀಕ್ಷೆ ಹೊರತು ಪಡಿಸಿ)** | |
| | | **ಪ್ರಥಮ/ದ್ವಿತೀಯ ವರ್ಷ** ಪೂರ್ಣ ಪರೀಕ್ಷೆಗೆ | ರೂ. 350.00 |
| | | ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ | ರೂ. 350.00 |
| | | ವಿಷಯವೊಂದಕ್ಕೆ | ರೂ. 150.00 |
| | | **(ಪ್ರಾಯೋಗಿಕ ಪರೀಕ್ಷೆಯೊಂದಿಗೆ)** | |
| | | **ಪ್ರಥಮ/ದ್ವಿತೀಯ ವರ್ಷ** ಪೂರ್ಣ ಪರೀಕ್ಷೆಗೆ | ರೂ. 460.00 |
| | | ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ | ರೂ. 460.00 |
| | | ವಿಷಯವೊಂದಕ್ಕೆ | ರೂ. 220.00 |
| | | **(ತೃತೀಯ ವರ್ಷ ಪ್ರಾಯೋಗಿಕ ಪರೀಕ್ಷೆಗಳನ್ನು ಹೊರತುಪಡಿಸಿ)** | |
| | | **ಆರನೇ ಸೆಮಿಸ್ಟರ್** | |
| | | **ಪ್ರತಿ ಸೆಮಿಸ್ಟರ್‌ನ ಪೂರ್ಣ** ಪರೀಕ್ಷೆಗೆ | ರೂ. 500.00 |
| | | ಸೆಮಿಸ್ಟರ್ ಹೊರತುಪಡಿಸಿ ಪೂರ್ಣ ಪರೀಕ್ಷೆಗೆ | ರೂ. 500.00 |
| | | ವಿಷಯವೊಂದಕ್ಕೆ | ರೂ. 220.00 |
| | | **(ತೃತೀಯ ವರ್ಷದ ಪ್ರಾಯೋಗಿಕ ಪರೀಕ್ಷೆಯೊಂದಿಗೆ)** | |
| | | **ಆರನೇ ಸೆಮಿಸ್ಟರ್** | |
| | | **ಪ್ರತಿ ಸೆಮಿಸ್ಟರ್‌ನ ಪೂರ್ಣ** ಪರೀಕ್ಷೆಗೆ | ರೂ. 670.00 |
| | | ಸೆಮಿಸ್ಟರ್ ಹೊರತುಪಡಿಸಿ ಪೂರ್ಣ ಪರೀಕ್ಷೆಗೆ | ರೂ. 670.00 |
| | | ವಿಷಯವೊಂದಕ್ಕೆ | ರೂ. 320.00 |

| | | | |
|---|---|---|---|
| 2. | ಬಿ.ಎಸ್ಸಿ./ಬಿ.ಎಸ್ಸಿ(ಹೋಮ್ ಸೈನ್ಸ್)/<br>ಬಿಸಿಎ/ಬಿಸಿಎಸ್<br>ಬಿ.ಕಾಂ ವೊಕೇಶನಲ್/<br>ಎಇಡಿಪಿಬಿ.ಕಾಂ ಬಿಎಫ್‌ಸಿಎಸ್‌ಇ/<br>ಬಿ.ಕಾಂ(ಲಾಜಿಸ್ಟಿಕ್) | ದ್ವಿತೀಯ ಹಾಗೂ ಚತುರ್ಥ ಸೆಮಿಸ್ಟರ್<br>(ಪ್ರಾಯೋಗಿಕ ಪರೀಕ್ಷೆ ಹೊರತುಪಡಿಸಿ)<br>ಪ್ರಥಮ/ದ್ವಿತೀಯ ವರ್ಷ ಪೂರ್ಣ ಪರೀಕ್ಷೆಗೆ<br>ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ<br>ವಿಷಯವೊಂದಕ್ಕೆ<br>(ಪ್ರಾಯೋಗಿಕ ಪರೀಕ್ಷೆಯೊಂದಿಗೆ)<br>ಪ್ರಥಮ/ದ್ವಿತೀಯ ವರ್ಷ ಪೂರ್ಣ ಪರೀಕ್ಷೆಗೆ<br>ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ<br>ವಿಷಯವೊಂದಕ್ಕೆ<br>ತೃತೀಯ ವರ್ಷ<br>(ಪ್ರಾಯೋಗಿಕ ಪರೀಕ್ಷೆಗಳನ್ನು ಹೊರತುಪಡಿಸಿ)<br>ಆರನೇ ಸೆಮಿಸ್ಟರ್<br>ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ<br>ಸೆಮಿಸ್ಟರ್ ಹೊರತುಪಡಿಸಿ ಪೂರ್ಣ ಪರೀಕ್ಷೆಗೆ<br>ವಿಷಯವೊಂದಕ್ಕೆ<br>(ಪ್ರಾಯೋಗಿಕ ಪರೀಕ್ಷೆಯೊಂದಿಗೆ)<br>ಆರನೇ ಸೆಮಿಸ್ಟರ್<br>ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ<br>ಸೆಮಿಸ್ಟರ್ ಹೊರತುಪಡಿಸಿ ಪೂರ್ಣ ಪರೀಕ್ಷೆಗೆ<br>ವಿಷಯವೊಂದಕ್ಕೆ | <br><br>ರೂ. 500.00<br>ರೂ. 500.00<br>ರೂ. 150.00<br><br>ರೂ. 500.00<br>ರೂ. 500.00<br>ರೂ. 220.00<br><br><br><br>ರೂ. 670.00<br>ರೂ. 670.00<br>ರೂ. 220.00<br><br><br>ರೂ. 670.00<br>ರೂ. 670.00<br>ರೂ. 320.00 |
| 3. | ಬಿ.ಎಸ್ಸಿ.(ಎಫ್.ಎನ್.ಡಿ.) | ಪರೀಕ್ಷಾ ಶುಲ್ಕದ ದರ (II, IV ಮತ್ತು VI ಸೆಮಿಸ್ಟರ್)<br>ಪ್ರತಿ ಸೆಮಿಸ್ಟರಿನ ಪೂರ್ಣ ಪರೀಕ್ಷೆಗೆ(ಎಲ್ಲಾ ಪತ್ರಿಕೆಗಳನ್ನೊಳಗೊಂಡು)<br>ವಿಷಯವೊಂದಕ್ಕೆ | <br>ರೂ.2500.00<br>ರೂ. 500.00 |
| 4. | ಬಿ.ಎಸ್ಸಿ. ಆ್ಯನಿಮೇಶನ್ ಮತ್ತು ವಿಜ್ಯುವಲ್ ಇಫೆಕ್ಟ್ಸ್ | ಪರೀಕ್ಷಾ ಶುಲ್ಕದ ದರ (II, IV ಮತ್ತು VI ಸೆಮಿಸ್ಟರ್)<br>ಪ್ರತಿ ಸೆಮಿಸ್ಟರಿನ ಪೂರ್ಣ ಪರೀಕ್ಷೆಗೆ(ಎಲ್ಲಾ ಪತ್ರಿಕೆಗಳನ್ನೊಳಗೊಂಡು)<br>ವಿಷಯವೊಂದಕ್ಕೆ | <br>ರೂ.1,500.00<br>ರೂ. 500.00 |
| 5. | ಬಿ.ಎಸ್ಸಿ.(ಫುಡ್ ಟೆಕ್ನಾಲಜಿ) | ಪರೀಕ್ಷಾ ಶುಲ್ಕದ ದರ (II, IV ಮತ್ತು VI ಸೆಮಿಸ್ಟರ್)<br>ಪ್ರತಿ ಸೆಮಿಸ್ಟರಿನ ಪೂರ್ಣ ಪರೀಕ್ಷೆಗೆ(ಎಲ್ಲಾ ಪತ್ರಿಕೆಗಳನ್ನೊಳಗೊಂಡು)<br>ವಿಷಯವೊಂದಕ್ಕೆ | ರೂ.2,500.00<br>ರೂ. 500.00 |
| 6. | ಬಿ.ವಿ.ಎ | ಪರೀಕ್ಷಾ ಶುಲ್ಕದ ದರ (II, IV ಮತ್ತು VI ಸೆಮಿಸ್ಟರ್)<br>ಪ್ರತಿ ಸೆಮಿಸ್ಟರಿನ ಪೂರ್ಣ ಪರೀಕ್ಷೆಗೆ(ಎಲ್ಲಾ ಪತ್ರಿಕೆಗಳನ್ನೊಳಗೊಂಡು)<br>ವಿಷಯವೊಂದಕ್ಕೆ<br>ಪರೀಕ್ಷಾ ಶುಲ್ಕದ ದರ (VIII ಸೆಮಿಸ್ಟರ್)<br>ಪ್ರತಿ ಸೆಮಿಸ್ಟರಿನ ಪೂರ್ಣ ಪರೀಕ್ಷೆಗೆ(ಎಲ್ಲಾ ಪತ್ರಿಕೆಗಳನ್ನೊಳಗೊಂಡು)<br>ವಿಷಯವೊಂದಕ್ಕೆ | <br>ರೂ. 900.00<br>ರೂ. 500.00<br><br>ರೂ.1400.00<br>ರೂ. 600.00 |
| 7. | ಬಿ.ಎಸ್ಸಿ (ಫ್ಯಾಷನ್ & ಅಪರಲ್ ಡಿಸೈನ್) | ಪ್ರತಿ ಸೆಮಿಸ್ಟರಿನ ಪೂರ್ಣ ಪರೀಕ್ಷೆಗೆ (II, IV ಮತ್ತು VI ಸೆಮಿಸ್ಟರ್)<br>ವಿಷಯವೊಂದಕ್ಕೆ | ರೂ. 1500.00<br>ರೂ. 500.00 |
| 8. | ಬಿ.ಎಸ್ಸಿ.(ಇಂಟೀರಿಯರ್ ಡಿಸೈನ್&ಡೆಕೊರೇಶನ್) | ಪ್ರತಿ ಸೆಮಿಸ್ಟರಿನ ಪೂರ್ಣ ಪರೀಕ್ಷೆಗೆ (II, IV ಮತ್ತು VI ಸೆಮಿಸ್ಟರ್)<br>ವಿಷಯವೊಂದಕ್ಕೆ | ರೂ. 1500.00<br>ರೂ. 500.00 |
| 9. | ಬಿ. ಹೆಚ್.ಎಸ್./<br>ಬಿ.ಎಸ್ಸಿ. (ಹೆಚ್.ಎಸ್.)<br>(ಮೂರು ವರ್ಷದ ಕೋರ್ಸು) | ಪಪರೀಕ್ಷಾ ಶುಲ್ಕದ ದರ II, IV ಸೆಮಿಸ್ಟರ್<br>ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ<br>1ನೇ ಮತ್ತು 2ನೇ ವರ್ಷದ ಪೂರ್ಣ ಪರೀಕ್ಷೆಗೆ<br>ವಿಷಯವೊಂದಕ್ಕೆ<br><br>ಮೂರನೇ ವರ್ಷದ ಆರನೇ ಸೆಮಿಸ್ಟರ್<br>ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ<br>ಮೂರನೇ ವರ್ಷದ ಪೂರ್ಣ ಪರೀಕ್ಷೆಗೆ<br>ವಿಷಯವೊಂದಕ್ಕೆ | <br>ರೂ. 2000.00<br>ರೂ. 2000.00<br>ರೂ. 500.00<br><br>ರೂ. 2500.00<br>ರೂ. 2500.00<br>ರೂ. 600.00 |
| 10. | ಬಿ.ಹೆಚ್.ಎಂ.<br>(ನಾಲ್ಕು ವರ್ಷದ ಕೋರ್ಸು) | ಪರೀಕ್ಷಾ ಶುಲ್ಕದ ದರ (II, IV ಮತ್ತು VI ಸೆಮಿಸ್ಟರ್)<br>ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ<br>1, 2 ಮತ್ತು 3ನೇ ವರ್ಷದ ಪೂರ್ಣ ಪರೀಕ್ಷೆಗೆ<br>ವಿಷಯವೊಂದಕ್ಕೆ<br><br>ಚತುರ್ಥ ವರ್ಷದ ಎಂಟನೇ ಸೆಮಿಸ್ಟರ್<br>ನಾಲ್ಕನೇ ವರ್ಷದ ಪೂರ್ಣ ಪರೀಕ್ಷೆಗೆ<br>ವಿಷಯವೊಂದಕ್ಕೆ | <br>ರೂ. 2000.00<br>ರೂ. 2000.00<br>ರೂ. 500.00<br><br>ರೂ .2500.00<br>ರೂ. 2500.00<br>ರೂ. 600.00 |

| | | | |
|---|---|---|---|
| 11. | ಬಿ.ಎ.ಎಸ್.ಎಲ್.ಪಿ. | **ಪರೀಕ್ಷಾ ಶುಲ್ಕದ ದರ (II, IV ಮತ್ತು VI ಸೆಮಿಸ್ಟರ್)**<br>ಪ್ರತಿ ಸೆಮಿಸ್ಟರಿನ ಪೂರ್ಣ ಪರೀಕ್ಷೆಗೆ(ಎಲ್ಲಾ ಪತ್ರಿಕೆಗಳನ್ನೊಳಗೊಂಡು)<br>ವಿಷಯವೊಂದಕ್ಕೆ | ರೂ. 2000.00<br>ರೂ. 500.00 |

18. ವಿದ್ಯಾರ್ಥಿಗಳು ಪರೀಕ್ಷೆಯ ಯಾವುದಾದರೂ ಭಾಗ/ಭಾಗಗಳಿಗೆ ಪಾವತಿಸಲಿರುವ ಒಟ್ಟು ಪರೀಕ್ಷಾ ಶುಲ್ಕವು ನಿಗದಿತ ಪೂರ್ಣ ಪರೀಕ್ಷಾ ಶುಲ್ಕವನ್ನು ಮೀರಬಾರದು.
19. **ವಿದೇಶಿ ಅಭ್ಯರ್ಥಿಗಳಿಗೆ ಇತರ ವಿದ್ಯಾರ್ಥಿಗಳಂತೆ ಏಕರೂಪದ ಶುಲ್ಕ ನಿಗದಿಪಡಿಸಿಲಾಗಿದೆ.**
20. **ಮೇಲೆ ನಿಗದಿಪಡಿಸಿದ ಪರೀಕ್ಷಾ ಶುಲ್ಕದ ಜೊತೆಗೆ ಪ್ರತೀ ಪರೀಕ್ಷೆಗೆ ರೂ.500/- UUCMS ವಿದ್ಯಾರ್ಥಿಗಳಿಗೆ ಪರೀಕ್ಷೆ ಮತ್ತು ಫಲಿತಾಂಶದ ಪ್ರೊಸೆಸಿಂಗ್ ಶುಲ್ಕ ಹಾಗೂ (ಪುನಾರವರ್ತಿತ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ) ಮತ್ತು ರೂ.200/- ಆನ್‌ಲೈನ್ ಎಪ್ಲಿಕೇಶನ್ ಪ್ರೊಸೆಸಿಂಗ್ ಶುಲ್ಕಗಳನ್ನು ಪಾವತಿಸತಕ್ಕದ್ದು.**
21. ವಿದ್ಯಾರ್ಥಿಗಳಿಂದ ಪಡೆದ ಒಟ್ಟು ಶುಲ್ಕವನ್ನು ಈ ಕೆಳಗಿನ ಕೋಡ್ ಸಂಖ್ಯೆಗಳಲ್ಲಿ ಬ್ಯಾಂಕ್ ಚಲನ್ ಮುಖಾಂತರ ಮಂಗಳೂರು ವಿಶ್ವವಿದ್ಯಾನಿಲಯ ನಿಧಿಗೆ ಪಾವತಿಸತಕ್ಕದ್ದು.
    ಅ) ಅರ್ಜಿ ಶುಲ್ಕ ... 008/14
    ಆ) ಪರೀಕ್ಷಾ ಶುಲ್ಕ ... 008/23
    ಇ) ಅಂಕಪಟ್ಟಿ ಶುಲ್ಕ ... 008/24
22. ಈ ಕೆಳಗೆ ನಮೂದಿಸಿರುವ ತಖ್ತೆಗಳನ್ನು ಮತ್ತು ದಾಖಲೆ ಪತ್ರಗಳನ್ನು ತಪ್ಪದೇ ಈ ಕಛೇರಿಗೆ ದಿನಾಂಕ: *05-06-2025ರ* ಒಳಗಾಗಿ ಕಳುಹಿಸಿಕೊಡುವುದು.
    ಅ) ಅಭ್ಯರ್ಥನ ಪಟ್ಟಿ - ದ್ವಿಪ್ರತಿಗಳಲ್ಲಿ
    ಆ) *2006 ಹಾಗೂ ಅದರ ಹಿಂದಿನ ಸಾಲಿನ ವಿದ್ಯಾರ್ಥಿಗಳ ಮ್ಯಾನ್ಯುವಲ್ ಅಭ್ಯರ್ಥನ ಪಟ್ಟಿಯನ್ನು ದ್ವಿಪ್ರತಿಗಳಲ್ಲಿ ಪ್ರತ್ಯೇಕವಾಗಿ ಸಲ್ಲಿಸುವುದು.*
    ಇ) ಕ್ರೋಢೀಕೃತ ಪರೀಕ್ಷಾ ಶುಲ್ಕವನ್ನು ಪಾವತಿಸಿದ ಒಂದು ಚಲನ್/ಡಿ.ಡಿ.
    ಈ) ಹಣಕಾಸು ತ:ಖ್ತೆ
    ಉ) ಪ್ರತೀ ಸೆಮಿಸ್ಟರ್‌ನ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಸೂಚಿಸುವ ತ:ಖ್ತೆ(ಲಗತ್ತಿಸಲಾದ ನಮೂನೆಯಲ್ಲಿ) ವಿದ್ಯಾರ್ಥಿಗಳ ವಿವರವನ್ನು Format 1 ಲಗತ್ತಿಸಲಾದ ಅಂಕಿಅಂಶ ತ:ಖ್ತೆಗಳನ್ನು ಕಡ್ಡಾಯವಾಗಿ ಈ ಕಚೇರಿಗೆ ಕಳುಹಿಸತಕ್ಕದ್ದು.
    ಊ) ಇತರ ಕಾಲೇಜು/ ವಿಶ್ವವಿದ್ಯಾನಿಲಯಗಳಿಂದ ವರ್ಗಾವಣೆ ಪ್ರವೇಶಾತಿ ಹೊಂದಿದ ವಿದ್ಯಾರ್ಥಿಗಳ ಬಗ್ಗೆ ಪ್ರತ್ಯೇಕ ವಿವರ ಸಲ್ಲಿಸುವುದು.
    ಋ) **ಪ್ರಶ್ನೆ ಪತ್ರಿಕೆ ಕೋರಿಕೆ ಪಟ್ಟಿಯನ್ನು ಈ ಹಿಂದೆ ಭರ್ತಿ ಮಾಡಿದ ವಿಧಾನದಲ್ಲಿ ಭರ್ತಿ ಮಾಡುವುದು.**

21/4/25

ಕುಲಸಚಿವರು (ಪರೀಕ್ಷಾಂಗ)

21/04/2025

ಲಗತ್ತು: ವಿದ್ಯಾರ್ಥಿಗಳ ಸಂಖ್ಯೆಯನ್ನು ಸೂಚಿಸುವ ತ:ಖ್ತೆ.

**ರಿಗೆ:**

**ವಿಶ್ವವಿದ್ಯಾನಿಲಯದ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ಪದವಿ ಕಾರ್ಯಕ್ರಮಗಳನ್ನು ಬೋಧಿಸುತ್ತಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.**

ಪ್ರತಿ:

1. ಕುಲಸಚಿವರು/ ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
2. ಸಹಾಯಕ ಕುಲಸಚಿವರು (ಪರೀಕ್ಷಾಂಗ) 1 ಮತ್ತು 2, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
3. ಕುಲಪತಿಯವರ ಆಪ್ತ ಕಾರ್ಯದರ್ಶಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
4. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ವಿಶ್ವವಿದ್ಯಾನಿಲಯ ಕಾಲೇಜು ಆವರಣ, ಮಂಗಳೂರು.
5. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಡಿ.ಸಿ. ಆಫೀಸಿನ ಬಳಿ, ದ.ಕ., ಮಂಗಳೂರು.
6. ಆಪ್ತ ಸಹಾಯಕರು, ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
7. ಅಧೀಕ್ಷಕರು ಎಸ್.1, ಎಸ್.2, ಎಸ್.3, ಎಸ್.4, ಎಸ್.6.
8. ಸಿಸ್ಟಂ ಅನಾಲಿಸ್ಟ್, ಕಂಪ್ಯೂಟರ್ ವಿಭಾಗ, ಕುಲಸಚಿವ (ಪರೀಕ್ಷಾಂಗ)ರ ಕಛೇರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
9. ನಿರ್ದೇಶಕರು, **DUIMS,** ಮಂಗಳೂರು ವಿಶ್ವವಿದ್ಯಾನಿಲಯ.